ಅಸಲು ದಾವಾ ನಂಃ 2/2024
ಪಿ ಡಬ್ಲ್ಯುಃ1

<u>ದಿನಾಂಕಃ **30-01-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ಪ್ರತಿವಾದಿ **1, 4** ಮತ್ತು **5** ರ ಪರ ಶ್ರೀ ಪಿ ಟಿ ಡಿ ವಕೀಲರಿಂದಃ</u>

2 ನೇ ವಾದಿ ಮೂಲತಃ ಕಾರ್ಕಳದಲ್ಲಿ ವಾಸ ಇರುತ್ತಾರೆ. 1 ಮತ್ತು 3 ನೇ ವಾದಿ ಮಕ್ಕಿಕೊಪ್ಪ ಜಯಪುರದಲ್ಲಿ ವಾಸ ಇರುತ್ತಾರೆ. 1 ಮತ್ತು 3 ನೇ ವಾದಿಗೆ ಮಕ್ಕಿಕೊಪ್ಪದಲ್ಲಿ ನಿವೇಶನ ಇರುತ್ತದೆ. ನನಗೆ ನೀಡಿದ ಅಧಿಕಾರ ಪತ್ರವನ್ನು ಜಯಪುರ ನಾಡಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ನನಗೆ ಅಧಿಕಾರ ಪತ್ರ ಬರೆದುಕೊಡುವ ಕಾಲಕ್ಕೆ ವಾದಿಯರು ಜಯಪುರಕ್ಕೆ ಬಂದಿದ್ದರು. ಅಧಿಕಾರ ಪತ್ರದಲ್ಲಿ ಹೇಳಿದ ನಮ್ಮ ಆಸ್ತಿಗಳ ಮಾಹಿತಿ ಸರಿಯಾಗಿರುತ್ತದೆ. ಅಧಿಕಾರ ಪತ್ರಕ್ಕೆ ವಾದಿಯರು ಫೋಟೋ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಧಿಕಾರ ಪತ್ರದಲ್ಲಿ ದಾವಾ ಸ್ವತ್ತುಗಳ ಬಗ್ಗೆ ಎಲ್ಲಾ ಮಾಹಿತಿ ಇರುತ್ತದೆ.

2. ಕೂಲೂರು ಗ್ರಾಮದ ಸರ್ವೆ ನಂಬರ್ 51 ರಲ್ಲಿ 4 ಎಕರೆ 30 ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ- 2 ಮತ್ತು 3 ರಲ್ಲಿ ಸರ್ವೆ ನಂಬರ್ 51 ರ ವಿಸ್ತೀರ್ಣ 4 ಎಕರೆ 30 ಗುಂಟೆ ಇದ್ದು ಆದರೆ 4 ಎಕರೆ 32 ಗುಂಟೆ ಬರುವುದಿಲ್ಲ ಎಂದರೆ ಸರಿಯಲ್ಲ. ಅಧಿಕಾರ ಪತ್ರದಲ್ಲಿ ಐಟಮಂ ನಂಬರ್ 02 ಸರ್ವೆ ನಂಬರ್ 50 ರಲ್ಲಿ 12 ಗುಂಟೆ ಎಂದು ತಿಳಿಸಿದ್ದು ಆದರೆ ನಿಪಿ- 2 ರಲ್ಲಿ 12 ಗುಂಟೆ ಎಂದು ನಾನು ವಿಸ್ತೀರ್ಣವನ್ನು ತಪ್ಪಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಧಿಕಾರ ಪತ್ರ ಬರೆದುಕೊಡುವ ಪೂರ್ವದಲ್ಲಿ ಸದರಿ ಪತ್ರದಲ್ಲಿ ನಮೂದಿಸಿದ ಸರ್ವೆ ನಂಬರ್‌ಗಳು ಪಕ್ಕಾ ಪೋಡಿಯಾಗಿ ಹೊಸ ಸರ್ವೆ ನಂಬರ್ ನೀಡಲಾಗಿತ್ತು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಪಿ- 11 ಸರ್ವೆ ನಂಬರ್ 51/3 ಕ್ಕೆ ಇದ್ದು ನಾನು ದಾವೆಯಲ್ಲಿ ಕೇಳಿದಂತ ಆಸ್ತಿಗೆ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಅಧಿಕಾರ ಪತ್ರದಲ್ಲಿ ನಮೂದಿಸಿದ ಸಾಕ್ಷಿದಾರರು ನಮ್ಮ ಸಂಬಂಧಿಕರು ಎಂದರೆ ಸರಿ. ಅವರು ಜಯಪುರದವರು ಇರುವುದಿಲ್ಲ ಎಂದರೆ ಸರಿ.

3. ವಾದಿಯರು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ನಾನು ನನ್ನ ಸಂಬಂಧಿಕರ ಜೊತೆ ಸೇರಿಕೊಂಡು ಅಧಿಕಾರ ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನು ಮತ್ತು ನಮ್ಮ ತಾಯಿ

ಮಾಹಿತಿ ಕೊಟ್ಟಿರುತ್ತೇವೆ. ಈ ದಾವೆ ಹಾಕುವ ಪೂರ್ವದಲ್ಲಿ ದಾವ ಆಸ್ತಿಗೆ ಸಂಬಂಧ ಪಟ್ಟ ದಾಖಲೆಗಳು ಮತ್ತು ಮಾಹಿತಿಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ವಾದಿಗಳು ಮತ್ತು 3 ನೇ ಪ್ರತಿವಾದಿಯ ಮದುವೆ 1975 ರ ಪೂರ್ವದಲ್ಲಿ ಆಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ವಾದಿ ಮತ್ತು 3 ನೇ ಪ್ರತಿವಾದಿ ಇವರ ಮದವೆಯನ್ನು 1,2 ನೇ ಪ್ರತಿವಾದಿ ಹಾಗೂ ಮೃತ ಶೇಖರ್ ಪೂಜಾರಿ ಹಣ ಜೋಡಿಸಿ ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ಕಾಂತು ಪೂಜಾರಿ ಇವರಿಗೆ 1981 ರಲ್ಲಿ ಮಂಜೂರು ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ಕಾಲಕ್ಕೆ ವಾದಿಯರು ಮತ್ತು ಪ್ರತಿವಾದಿ 3 ರವರು ಕಾಂತು ಪೂಜಾರಿಯ ಒಟ್ಟು ಕುಟುಂಬದ ಸದಸ್ಯರು ಇಲ್ಲದೇ ಇದ್ದರೂ ನಾನು ಅವರು ಒಟ್ಟು ಕುಟುಂಬದ ಸದಸ್ಯರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 2 ನೇ ಪ್ರತಿವಾದಿ ಸುಮಾರು 45 ವರ್ಷಗಳಿಂದ ಪೂನಾದಲ್ಲಿ ವಾಸ ಇರುತ್ತಾರೆ. ಅವರು ಪೂನಾದ ಹುಡುಗಿಯನ್ನು ಮದುವೆ ಮಾಡಿಕೊಂಡು ಅಲ್ಲಿಯೇ ಇರುತ್ತಾರೆ ಎಂದರೆ ಸರಿ. ಅದೇ ರೀತಿ 3 ನೇ ಪ್ರತಿವಾದಿ ಮದುವೆಯಾದ ನಂತರ ಮುಂಬೈನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ ಮಕ್ಕಿಕೊಪ್ಪದಲ್ಲಿ ಯಾವುದೇ ವಿಳಾಸ ಆಗಲೀ ಅಥವಾ ಆಸ್ತಿಯಾಗಲೀ ಇರುವುದಿಲ್ಲ ಎಂದರೆ ಸರಿ. ನಾವು 2 ನೇ ಪ್ರತಿವಾದಿಯ ವಿಳಾಸವನ್ನು ಉದ್ದೇಶಪೂರ್ವಕವಾಗಿ ವಾದ ಪತ್ರದಲ್ಲಿ ತಪ್ಪಾಗಿ ತೋರಿಸಿರುತ್ತೇನೆ ಎಂದರೆ ಸಾಕ್ಷಿ ವಿಳಾಸ ತಪ್ಪು ಇರುತ್ತದೆ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ 45 ವರ್ಷಗಳ ಇಂದ ಪೂನಾದಲ್ಲಿ ವಾಸ ಇರುವ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ- 14 ಮತ್ತು 15 ರಲ್ಲಿ 2 ನೇ ಪ್ರತಿವಾದಿ ಮಹರಾಷ್ಟ್ರದಲ್ಲಿ ವಾಸ ಇರುವ ಬಗ್ಗೆ ನಮೂದ ಇರುತ್ತದೆ ಎಂದರೆ ಸರಿ. ನಾವು ಉದ್ದೇಶಪೂರ್ವಕವಾಗಿ ಸುಳ್ಳು ವಿಳಾಸ ನಮೂದಿಸಿ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತು 1 ಸರ್ವೆ ನಂಬರ್ 48 ಪೈಕಿ 2 ಎಕರೆ 30 ಗುಂಟೆ ವಿಸ್ತೀರ್ಣ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 14 ಮತ್ತು 15 ರಲ್ಲಿ ವಾದಿಯರು ಹಾಗೂ 3 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದು ಕೊಟ್ಟ ಆಧಾರ ಮೇಲೆ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ

ಎಂದರೆ ಸರಿ ಸಾಕ್ಷಿ ಮುಂದುವರೆದು ಅವರು ಮಾರಾಟ ಮಾಡುತ್ತಾರೆ ಎಂದು ನಮಗೆ ಗೊತ್ತಿರಲಿಲ್ಲ ಸಾಲ ಬೇಕು ಎಂದು ಸಹಿ ಪಡೆದಿದ್ದರು ಎಂದು ಉತ್ತರಿಸುತ್ತಾರೆ. ಈ ರೀತಿ ಆಸ್ತಿ ಮಾರಾಟ ಮಾಡಿದ ಬಗ್ಗೆ ನಾವು ದಾಖಲೆಯನ್ನು ಇತ್ತೀಚೆಗೆ ತೆಗೆಸಿದಾಗ ಗೊತ್ತಾಗಿರುತ್ತದೆ. ಸದರಿ ಕ್ರಯ ಪತ್ರಗಳನ್ನು ನಾಗೇಂದ್ರ ಪ್ರಸಾದ ವಕೀಲರು ಜಯಪುರದವರು ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕ್ರಯ ಪತ್ರ ಮಾಡುವ ಕಾಲಕ್ಕೆ ಸದರಿ ವಕೀಲರು ಕ್ರಯ ಪತ್ರದ ಎಲ್ಲಾ ವಿಚಾರಗಳನ್ನು ತಿಳಿಸಿ ಹೇಳಿ ಕ್ರಯ ಪತ್ರ ಮಾಡಿದ್ದರೂ ಸಹ ನಾನು ಈ ದಿನ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಕ್ರಯ ಪತ್ರ ಆದ ನಂತರ ಅವರ ಸಾಲಕ್ಕಾಗಿಯೇ ಎಂದು ತಮ್ಮ ಬಳಿ ಸಹಿ ಪಡೆದಿದ್ದು ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದು 2 ನೇ ಪ್ರತಿವಾದಿಗಾಗಲೀ ಅಥವಾ ಗಣೇಶ್ ಮತ್ತು ಜ್ಯೋತಿ ಗಣೇಶ್ ಇವರಿಗೆ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಗಣೇಶ್ ಮತ್ತು ಜ್ಯೋತಿ ಗಣೇಶ್ ಇವರು ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಕ್ರಯ ಪತ್ರದಲ್ಲಿ ದಾವಾ ಸ್ವತ್ತು 1 ರಘುನಾಥ್ ಇವರ ಸ್ವಯಾರ್ಜಿತ ಆಸ್ತಿ ಎಂದು ಇದ್ದು ಒಟ್ಟು ಕುಟುಂಬದ ಆಸ್ತಿ ಎಂದು ನಮೂದ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಕ್ರಯ ಪತ್ರದಲ್ಲಿ ರೂ. 3 ಲಕ್ಷ ಹಣವನ್ನು 2 ನೇ ಪ್ರತಿವಾದಿ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 13.04.2017 ರಲ್ಲಿ ಕ್ರಯ ಪತ್ರ ಆದ ವಿಚಾರ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

7. ಕಾಂತು ಪೂಜಾರಿ ಇವರಿಗೆ 3 ಜನ ಗಂಡು ಮಕ್ಕಳಿದ್ದು ಅವರ ಹೆಸರು ದಯಾನಂದ, ರಘುನಾಥ ಮತ್ತು ಶೇಖರ ಪೂಜಾರಿ ಇರುತ್ತಾರೆ. ಅವರಲ್ಲಿ ಶೇಖರ್ ಪೂಜಾರಿ ಅವಿವಾಹಿತರಾಗಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು ಕಾಂತು ಪುಜಾರಿಯ ಜೊತೆ 1 ನೇ ಪ್ರತಿವಾದಿ ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಕಾಂತು ಪೂಜಾರಿ ಇವರಿಗೆ ಜಮೀನು ಮಂಜೂರು ಆಗುವ ಕಾಲಕ್ಕೆ ದಯಾನಂದ, ರಘುನಾಥ ಮತ್ತು ಶೇಖರ ಪೂಜಾರಿ ಮಾತ್ರ ಒಟ್ಟು ಕುಟುಂಬದ ಸದಸ್ಯರು ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕಾಂತು ಪೂಜಾರಿ

ನಿಧನರಾದ ನಂತರ 1992 ರಲ್ಲಿ ಹಕ್ಕು ಬದಲಾವಣೆ ಆದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ 1 , 2 , 4 ಮತ್ತು 5 ರವರಿಗೆ ಆಸ್ತಿಯಲ್ಲಿ ಭಾಗ ಕೊಡುವಂತೆ ಕೋರಿ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ. ದಿನಾಂಕ 01.02.02024 ರಂದು ಭಾಗ ಕೊಡುವಂತೆ 1 ನೇ ಪ್ರತಿವಾದಿಯನ್ನು ಕೇಳಿದ್ದು 2 ನೇ ಪ್ರತಿವಾದಿ ಮಹರಾಷ್ಟ್ರದಲ್ಲಿ ಇರುವ ಕಾರಣ ಅವರನ್ನು ಕೇಳಿರುವುದಿಲ್ಲ.

8. ನನ್ನ ವಾದ ಪತ್ರದಲ್ಲಿ ಪ್ರತಿವಾದಿ 1 ಮತ್ತು 2 ರವರ ಬಳಿ ಭಾಗ ಕೇಳಿದ್ದು ಅವರ ಕೊಡುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ದಿನಾಂಕ 01.02.2024 ರಂದು ಪ್ರತಿವಾದಿ 1 ಮತ್ತು 2 ರವರನ್ನು ಭಾಗ ಕೊಡುವಂತೆ ಕೇಳದೇ ಇದ್ದರೂ ಸುಳ್ಳು ವ್ಯಾಜ್ಯ ಕಾರಣ ತೋರಿಸಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 2010 ರಲ್ಲಿ ಕಾಂತು ಪೂಜಾರಿ ಮಕ್ಕಳಾದ 1 ಮತ್ತು 2 ನೇ ಪ್ರತಿವಾದಿ ಅಧಿಕೃತವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ ಸಾಕ್ಷಿ ನಂತರ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಭಾಗ ಆಗಿರುವ ವಿಚಾರ ನಮಗೆ ಭಾಗ ಕೊಡುವುದಿಲ್ಲ ಹೇಳಿದಾಗ ದಿನಾಂಕ 01.02.2024 ರ ನಂತರ ಗೊತ್ತಾಗಿರುತ್ತದೆ. 2010 ರಲ್ಲಿ ಅದ ವಿಭಾಗ ಪತ್ರದ ಬಗ್ಗೆ ನನಗೆ ಗೊತ್ತಿದ್ದರೂ ಸಹ ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನೋಂದಾಯಿತ ವಿಭಾಗ ಪತ್ರದ ಮುಖಾಂತರ ಕಂದಾಯ ಅಧಿಕಾರಿಗಳು ಪ್ರಕಟಣೆ ಪಡಿಸಿ ಆ ಅವಧಿಯಲ್ಲಿ ನಾವು ಯಾರು ತಕರಾರು ಸಲ್ಲಿಸದ ಕಾರಣ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಯಾನಂದ ಪೂಜಾರಿ ಇವರಿಗೆ ಅನಿಲ್ ಮತ್ತು ಸುನಿಲ್ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. 2011 ರಲ್ಲಿ ದಯಾನಂದ ಪೂಜಾರಿ ಮತ್ತು ಅವರ ಮಕ್ಕಳು ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಆಗುವ ಕಾಲಕ್ಕೆ ನಾವಾಗಲೀ ಅಥವಾ 3 ನೇ ಪ್ರತಿವಾದಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗ ಪತ್ರವನ್ನು ನಮ್ಮ ಹಕ್ಕಿಗೆ ಬಾಧ್ಯಸ್ಥರು ಆಗುವುದಿಲ್ಲ ಎಂದು ನಾವು ದಯಾನಂದ,

ರಪಘುನಾಥ, ಅನಿಲ್ ಮತ್ತು ಸುನಿಲ್ ಇವರಿಗೆ ನೋಟೀಸು ಕೊಟ್ಟಿರುವುದಿಲ್ಲ ಎಂದರೆ ಸರಿ. ಸುನಿಲ್ ಮತ್ತು ಅನಿಲ್ ಇವರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಪ್ರತಿವಾದಿ 8 ರಿಂದ 11 ರವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾವು ಕಾಂತು ಪೂಜಾರಿ ಇವರಿಗೆ ಆಸ್ತಿಗಳು ಹೇಗೆ ಬಂದವು ಆನಂತರ ಅವರಿಂದ ಅವರ ಮಕ್ಕಳಿಗೆ ಹೇಗೆ ಹೋದವು ಮತ್ತು ಸುನಿಲ್ ಮತ್ತು ಅನಿಲ್ ಇವರಿಗೆ ಯಾವ ರೀತಿ ಆಸ್ತಿಗಳು ಬಂದವು ಎಂಬ ಬಗ್ಗೆ ದಾಖಲೆಗಳನ್ನು ಮತ್ತು ಮಾಹಿತಿಯನ್ನು ಈ ದಾವೆ ಹೂಡುವ ಕಾಲಕ್ಕೆ ನಮ್ಮ ವಕೀಲರಿಗೆ ತಿಳಿಸಿರುತ್ತೇವೆ.

10. ಪ್ರತಿವಾದಿ 8 ರಿಂದ 11 ರವರಿಗೆ ಆಸ್ತಿಗಳು ಹೇಗೆ ಹೋಗಿರುತ್ತವೆ ಎಂಬುದರ ಬಗ್ಗೆ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿ 8 ರಿಂದ 11 ರವರು ಯಾವ ಸರ್ವೆ ನಂಬರ್ ನ ಆಸ್ತಿಯನ್ನು ಖರೀದಿಸಿರುತ್ತಾರೆ ಮತ್ತು ಅದಕ್ಕೆ ಸಂಬಂಧ ಪಟ್ಟ ದಾಖಲೆಯನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ನಾನು ನನ್ನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ಅದರಲ್ಲಿ ಬರೆದು ವಿಚಾರಗಳ ಬಗ್ಗೆ ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2 ನೇ ಪ್ರತಿವಾದಿಯು ಸರ್ವೆ ನಂಬರ್ 51/3 ರಲ್ಲಿ 11 ಗುಂಟೆ ಜಾಗವನ್ನು ಅಭಿಲಾಷ್ (9 ನೇ ಪ್ರತಿವಾದಿ) ಇವರಿಗೆ ಮಾರಾಟ ಮಾಡಿದ ಬಗ್ಗೆ ನಾನು ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ